


### ಪರಿಸರ ಸ್ನೇಹಿ

ಸುಮಂಗಲಾ ಮುಮ್ಮಿಗಟ್ಟಿ ಅವರ 'ಇರುವುದೊಂದೇ ಪರಿಸರ' ಮುಖಪುಟ (ಸುಧಾ, ಜೂನ್ 4) ಲೇಖನ ಮುಂಬರುವ ಅಪಾಯಕಾರಿ ದಿನಗಳ ಭೀಕರತೆಯನ್ನು ತಿಳಿಸಿತು. ಪರಿಸರ ಉಳಿಸಲು ನಾವು ಎಚ್ಚರ ವಹಿಸದಿದ್ದರೆ ಅನಾಹುತ ಖಂಡಿತ. ನಾವು ಪರಿಸರಸ್ನೇಹಿಯಾಗಿ ಬದುಕಿದಲ್ಲಿ ಮಾತ್ರ ವಿಶ್ವವನ್ನು ಉಳಿಸಿಕೊಳ್ಳಲು ಸಾಧ್ಯ.

-ಹೇಮಲತಾ ಸುಬ್ರಹ್ಮಣ್ಯ, ಹಾಲ್ಮುತ್ತೂರು, ಬಿ.ಎನ್. ಸೊಲ್ಲಾಪುರೆ, ಬೀದರ್, ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ಸರ್ವಜಿತ, ಹುಬ್ಬಳ್ಳಿ, ಪಿ. ಗೋವಿಂದರಾಜು, ಮಹಾವೀರ ಕಾಸರ, ಸು. ವಿಜಯಲಕ್ಷ್ಮಿ, ವೈ.ಜಿ. ನರಸಿಂಹನ್, ಶಿವಮೊಗ್ಗ, ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ, ನಾಗೇಶ್‌ಕುಮಾರ್ ಸಿ.ಎಸ್. ಚೆನ್ನೈ, ಎಸ್.ಪಿ. ಶಾನುಭಾಗ, ಬೆಂಗಳೂರು

### ಎಚ್ಚರಿಕೆಯ ಗಂಟೆಯಂತಿದೆ

'ಪಶ್ಚಿಮ ಘಟ್ಟ ನಮಗೆಷ್ಟು ಹತ್ತಿರ' (ಅಚ್ಚನಹಳ್ಳಿ ಸುಚೇತನ) ಲೇಖನ ಮನುಕುಲಕ್ಕೆ ಎಚ್ಚರಿಕೆಯ ಗಂಟೆಯಂತಿದೆ.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ, ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ, ಸವಿನಯ, ಸಾಗರ

### ಅರ್ಥಪೂರ್ಣ

ವಿಚಾರಲಹರಿಯಲ್ಲಿ ತೋಷ ಅವರು ಇಹದ ಹಾದಿಯ ಬಗ್ಗೆ ಬರೆದಿದ್ದು, ಬಹಳ ಅರ್ಥಪೂರ್ಣವಾಗಿದೆ.

-ಶ್ರೀನಾಥ್ ಕೊನೇಟಿ, ಬೆಂಗಳೂರು

### ಸಾಮಾಜಿಕ ಕಾಳಜಿ

'ನಿಮ್ಮೊಡನೆ'ಯಲ್ಲಿ ರಘುನಾಥ ಚ.ಹ. ಅವರು ಬರೆದ 'ಉನ್ನತ ಶಿಕ್ಷಣ ಎಂಬ ಗಗನಕುಸುಮ' ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸಿದೆ. ಚಿಂತನೆ ಸರಿಯಾಗಿದೆ. ಬರಹ ಸಕಾಲಿಕ.

-ಎಂ.ಜಿ. ರಾಮಚಂದ್ರ, ಮಂಡಗಳಲೆ, ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ, ಮುಕುಂದ ಹೆರಕಲ್ಲ, ಕಲಬುರಗಿ

### ಉತ್ತಮ ಲೇಖನ

'ದಯಾ ಮರಣ ಕೊಡಬಾರದೆ?' ಡಾ.ಅ. ಶ್ರೀಧರ ಅವರ ಲೇಖನ ಚೆನ್ನಾಗಿದೆ. ಮನುಷ್ಯನ ನೋವು ಸಂಕಟಗಳನ್ನು ತರ್ಕಿಸಿದ ಲೇಖನವಿದು.

-ಎಚ್.ಆನಂದಕುಮಾರ್, ಚಿತ್ರದುರ್ಗ

### ಮನಮೋಹಕ

ಪ್ರವಾಸ ಲೇಖನ ಡಾ.ಅರುಣ್ ಇಸ್ಲೂರು ಬರೆದ 'ಮಲೇಷ್ಯಾದಲ್ಲೊಂದು ಗಾಜಿನ ದೇವಾಲಯ' ಮನಮೋಹಕವಾಗಿತ್ತು. ಗಾಜಿನ ದೇವಾಲಯದ ವಿಭಿನ್ನ ಚಿತ್ರಗಳು ಮನಸೂರೆಗೊಂಡವು.

-ಎಸ್.ಪ್ರಭಾ, ಬೆಂಗಳೂರು, ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

### ನಮ್ಮ ದೇಶದಲ್ಲೂ ಇದೆ

ಗಾಜಿನ ದೇವಾಲಯ ಚಿತ್ರಲೇಖನ ಓದಿ ಖುಷಿಯಾಯಿತು. ನಮ್ಮ ದೇಶದ ತುದಿಯಲ್ಲಿ ಜಮ್ಮು ರೈಲ್ವೇ ನಿಲ್ದಾಣದ ಹೊರಗೆ ಕೂಡ ಇಂತಹ ಗಾಜಿನ ದೇವಾಲಯವಿದೆ. ಗಾಜಿನಲ್ಲಿ ರಾಮಾಯಣದ ದೃಶ್ಯಗಳು, ಹೂ ಬಳ್ಳಿಗಳ ಚಿತ್ರಗಳಿವೆ.

-ರತ್ನಾ ಶಿವಭಟ್ಟ, ಹುಬ್ಬಳ್ಳಿ

### ಆರೋಗ್ಯ ಲೇಖನ

ಆರೋಗ್ಯ ಪುಟದಲ್ಲಿ ಡಾ.ಎ.ಕೆ.ಸತೀಶ್ ರಾವ್ ಅವರ 'ಕಂಗೆಡಿಸುವ ಕರುಳಿನ ಕಾಯಿಲೆ' ಲೇಖನ ಬಹಳ ಉಪಯುಕ್ತ ಮತ್ತು ಆ ಕಾಯಿಲೆ ಇರುವವರಿಗೆ ಎಚ್ಚರಿಕೆಯನ್ನೂ ನೀಡಿದೆ.

-ಟಿ.ಆರ್. ಲಲಿತರಾವ್, ಬೆಂಗಳೂರು

### ಸಮಗ್ರ ಮಾಹಿತಿ

'ಘಟಂನಲ್ಲಿ ಶ್ರುತಿ-ಲಯ ಚಿತ್ತಾರ' (ಉಮಾ ಅನಂತ್) ಲೇಖನ ಘಟ ಹಾಗೂ ಇದರ ವಾದನದ ಬಗ್ಗೆ ಸಮಗ್ರ ಮಾಹಿತಿ ನೀಡಿದೆ. ವಿದುಷಿ ಸುಕನ್ಯಾ ರಾಮಗೋಪಾಲ್ ಅವರ ಘಟಂ ಕಛೇರಿಯನ್ನು ನಾನು ಬಹಳಷ್ಟು ಕೇಳಿದ್ದೇನೆ. ಆದರೂ ಪಕ್ಕವಾದ್ಯಕ್ಕೆ ಹೆಂಗಸರು ಬೇಡ ಎನ್ನುವ ಪುರುಷ ಕಲಾವಿದರ ಧೋರಣೆ ಸರಿಯಿಲ್ಲ.

-ಪಿ.ಎ. ಸುಧೀಂದ್ರ, ಬೆಂಗಳೂರು

### ಉತ್ತಮ ಕಥೆಗಳು

ಡಿ.ಎನ್.ಶ್ರೀನಾಥ್ ಅವರ ಅನುವಾದಿತ ಕಥೆ 'ಅಸ್ಥಿ' ಮತ್ತು ಡಾ.ಎಚ್.ಎಸ್. ಅನುಪಮಾ ಅವರ ದೃಷ್ಟಾಂತ ಕಥೆಗಳು ತುಂಬ ಚೆನ್ನಾಗಿವೆ.

-ರಾಜಶೇಖರ ಹಾದಿಮನಿ, ಧಾರವಾಡ, ಸುಂದರ್, ಬೆಂಗಳೂರು, ಪ್ರದೀಪ್ ಎನ್. ಚೆಲುವರಸನಕೊಪ್ಪಲು

### ಲೈಂಗಿಕ ಶಿಕ್ಷಣದ ಅರಿವು

ಡಾ.ವಿನೋದ ಛೆಬ್ಬಿ ಅವರ ಬರಹ ಯುವಕರ, ದಂಪತಿಗಳ, ವೃದ್ಧರ.. ಹೀಗೆ ಎಲ್ಲರ ಸಮಸ್ಯೆಗಳನ್ನು ಬಗೆಹರಿಸುವ, ಗೊಂದಲಗಳ ಪರಿಹಾರ, ಲೈಂಗಿಕ ಶಿಕ್ಷಣ ಅರಿವು ಮೂಡಿಸುವ ಕೆಲಸ ಮಾಡುತ್ತಿದೆ.

-ಪದ್ಮ ಬಿ.ಎಂ. ಬೆಂಗಳೂರು, ಡಾ.ಜೆ. ರಶ್ಮಿರಾಣಿ, ಮೈಸೂರು

